201 ಶ್ರೀ. ಸುರೇಶ್ ಬಾಬು ಸಿ.ಬಿ.

ಮಾನ್ಯ ಮುಖ್ಯ ಮಂತ್ರಿಗಳು

ಅ) ಚಿಕ್ಕನಾಯಕನಹಳ್ಳಿ ಪಟ್ಟಣದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದ್ದ ಆಚಾರ್ಯ ತೀ.ನಂ.ಶ್ರೀ ಶತಮಾನೋತ್ಸವ ಭವನ ಕಾಮಗಾರಿ ಇದುವರೆಗೆ ಪ್ರಾರಂಭವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಈ ಕಾಮಗಾರಿಗೆ ಸರ್ಕಾರವು 150.00 ರೂ. ಲಕ್ಷ ಅನುದಾನ ನಿಗಧಿ ಮಾಡಿದ್ದು, ಇದರಲ್ಲಿ 100.00 ರೂ. ಲಕ್ಷ ಮಾತ್ರ ಬಿಡುಗಡೆ ಮಾಡಲಾಗಿದ್ದು, ಉಳಿದ 50.00 ಲಕ್ಷ ಬಿಡುಗಡೆಯಾಗಿಲ್ಲದಿರುವುದು ನಿಜವಲ್ಲವೇ;

ಹೌದು.

ಇ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಉಳಿದ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ತೀ.ನಂ.ಶ್ರೀ ಶತಮಾನೋತ್ಸವ ಭವನವನ್ನು ತೀರ್ಥಪುರ ಗ್ರಾಮದಿಂದ ಚಿಕ್ಕನಾಯಕನಹಳ್ಳಿ ಕೇಂದ್ರ ಸ್ಥಳದ ಕೇದಿಗೆ ಹಳ್ಳಿ ಸರ್ವೇ ನಂ.14 ರಲ್ಲಿನ ಖಾಲಿ ಜಾಗಕ್ಕೆ ನಿಗಧಿ ಪಡಿಸಲಾಗಿತ್ತು. ಶಾಸಕರು ಹಾಗೂ ಇನ್ನಿತರ ಜನ ಪ್ರತಿನಿಧಿಗಳು ಸಾರ್ವಜನಿಕ ಒತ್ತಾಯದ ಮೇರೆಗೆ ನಿರ್ಮಾಣ ಸ್ಥಳವನ್ನು ಚಿಕ್ಕನಾಯಕನ ಹಳ್ಳಿ ತಾಲ್ಲೂಕು ಮೈದಾನದ ಬಿ.ಎಸ್.ಎನ್.ಎಲ್. ಪಕ್ಕ ಇರುವ ಪುರಸಭೆಯ ಜಮೀನು ಇರುವ ಸ್ಥಳಕ್ಕೆ ಬದಲಾಯಿಸಲಾಗಿರುತ್ತದೆ. ಈ ರೀತಿ ಎರಡು ಬಾರಿ ಸ್ಥಳ ಬದಲಾವಣೆ ಮಾಡಿರುವುದರಿಂದ ನಿರ್ಮಾಣ ಕಾರ್ಯ ಆರಂಭವಾಗುವುದು ತಡವಾಯಿತು. ರೂ. 100.00 ಲಕ್ಷಗಳ ಮೊತ್ತಕ್ಕೆ ಕಾಮಗಾರಿ ಪ್ರಾರಂಭಿಸಲು ಟೆಂಡರ್ ಕರೆಯಲಾಗುವುದು. ಪ್ರಗತಿ ನೋಡಿ ಉಳಿದ ಅನುದಾನ ಮಂಜೂರು ಮಾಡುವ ಬಗ್ಗೆ ಸೂಕ್ತ ಕ್ರಮ ಜರುಗಿಸಲಾಗುವುದು.

143 ಶ್ರೀ. ಬಾಲಕೃಷ್ಣ. ಹೆಚ್.ಸಿ

ಮಾನ್ಯ ಮುಖ್ಯ ಮಂತ್ರಿಗಳು

ಅ) ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಯಾವ ದಿನಾಂಕದಿಂದ ಜಾರಿಗೆ ಬರುವಂತೆ 58 ವರ್ಷದಿಂದ 60 ವರ್ಷಕ್ಕೆ ಏರಿಸಲಾಗಿದೆ. ಈ ಆದೇಶದ ಝೆರಾಕ್ಸ್ ಪ್ರತಿಯನ್ನು;

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 44 ಸೇನಿಸಿ 2008 ದಿನಾಂಕ 28-7-2008 ರಲ್ಲಿ ದಿನಾಂಕ 17.7.2008 ರಿಂದ ಜಾರಿಗೆ ಬರುವಂತೆ ಸರ್ಕಾರಿ ನೌಕರರ ನಿವೃತ್ತಿಯ ವಯಸ್ಸನ್ನು 58 ವರ್ಷಗಳಿಂದ 60 ವರ್ಷಗಳಿಗೆ ಹೆಚ್ಚಿಸಲಾಗಿದೆ. ಈ ಆದೇಶವು ನ್ಯಾಯಾಂಗ ಅಧಿಕಾರಿಗಳು ಹಾಗೂ ಸ್ಥಳೀಯ (local bodies) ಸಂಸ್ಥೆಗಳ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೂ ಅನ್ವಯವಾಗುತ್ತದೆ.

ಆ) ಈ ಏರಿಕೆಯಿಂದಾಗಿರುವ ಪ್ರಸ್ತುತ ಎರಡು ವರ್ಷದಲ್ಲಿ ನಿವೃತ್ತಯಾಗಬೇಕಾಗಿದ್ದ ಸಿಬ್ಬಂದಿ ಸಂಖ್ಯೆ ಎಷ್ಟು (ಇಲಾಖಾವಾರು ಮತ್ತು ದರ್ಜೆದಾರು ವಿವರ ನೀಡುವುದು);

ವಾರ್ಷಿಕವಾಗಿ ಸರಾಸರಿ ವಿವಿಧ ದರ್ಜೆಯ 15,000 ನೌಕರರು ನಿವೃತ್ತರಾಗುತ್ತಾರೆ, ಈ ಆದೇಶದಿಂದಾಗಿ ಸುಮಾರು 30,000 ನೌಕರರ ನಿವೃತ್ತಿಯು ಎರಡು ವರ್ಷಗಳು ಮುಂದಕ್ಕೆ ಹೋಗುತ್ತದೆ,

ಇ) ಈ ಅವಧಿಯಲ್ಲಿ (ಎರಡು ವರ್ಷದಲ್ಲಿ) ಹೊಸದಾಗಿ ನೇಮಕಗೊಳ್ಳಬೇಕಾದ ಸಿಬ್ಬಂದಿಗಿಂತ ನಿವೃತ್ತಿ ಹೊಂದಬೇಕಾಗಿದ್ದ ಸಿಬ್ಬಂದಿಗೆ ಎಷ್ಟು ಹೆಚ್ಚಿನ ವೇತನ ನೀಡಬೇಕಾಗಿದೆ (ಇಲಾಖಾವಾರು ವಿವರ ನೀಡುವುದು);

ಹೊಸದಾಗಿ ನೇಮಕವಾಗುವ ಸಿಬ್ಬಂದಿಗೆ ನೀಡುವ ವೇತನದ ಎರಡು ಪಟ್ಟು ವೇತನವನ್ನು ನಿವೃತ್ತರಾಗುವ, ಸಿಬ್ಬಂದಿಯು ಪಡೆಯುತ್ತಿರುತ್ತಾರೆ, ಆದರೆ ನಿವೃತ್ತರಾಗುವ ಸಿಬ್ಬಂದಿಗೆ ಅವರ ಮೂಲ ವೇತನದ ಅರ್ಧದಷ್ಟನ್ನು ವಿಶ್ರಾಂತಿ ವೇತನವಾಗಿ ನೀಡಲಾಗುತ್ತದೆ. ಅಲ್ಲದೆ ಒಂದು ಬಾರಿಯು ಪಾವತಿಯಾಗಿ ನಿವೃತ್ತಿ ಉಪದಾನವನ್ನು ನೀಡಲಾಗುತ್ತದೆ.

ಈ) ನಿವೃತ್ತಿ ವಯಸ್ಸಿನ ಏರಿಕೆಯಿಂದ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುವುದಿಲ್ಲವೇ ಹಾಗೂ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಸರ್ಕಾರ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಾಗಿದೆ?

ಜುಲೈ 2008 ರಲ್ಲಿ ನಿವೃತ್ತಿ ವಯಸ್ಸನ್ನು ಹೆಚ್ಚಿಸಲು ಪರಿಶೀಲಿಸಿದಾಗ ರಾಜ್ಯದ ವಿವಿಧ ಇಲಾಖೆಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಖಾಲಿ ಹುದ್ದೆಗಳಿದ್ದವು, ನಿರುದ್ಯೋಗಿ ಯುವಕರು ಅವಕಾಶ ವಂಚಿತರಾಗುವುದನ್ನು ತಪ್ಪಿಸಲು ಸರ್ಕಾರಿ ಸೇವೆಗೆ ಸೇರಲು ನಿಗದಿಪಡಿಸಿದ್ದ ಗರಿಷ್ಠ ವಯೋಮಿತಿಯನ್ನು 2 ವರ್ಷಗಳಷ್ಟು ಹೆಚ್ಚಿಸಿ ದಿನಾಂಕ 18-12-08 ರಿಂದ ಜಾರಿಗೆ ಬರುವಂತೆ ನಿಯಮಗಳನ್ನು ತಿದ್ದುಪಡಿ ಮಾಡಲಾಗಿದೆ. ಈ ಎಲ್ಲಾ ಕಾರಣಗಳಿಂದ ನಿರುದ್ಯೋಗ ಸಮಸ್ಯೆಯು ಹೆಚ್ಚಾಗುವ ಅವಕಾಶವಿರುವುದಿಲ್ಲ.

- - - - - -